# ಕಲ್ಪನೆ



ಒಂಚೂರೂ ಸೋಂಕಿಲ್ಲದ ಪ್ರೀತಿಗೆ ಮಗುಪ್ರೀತಿ ಎಂದು ಹೆಸರಿಡಬಹುದೇನೋ. ಮೇಕೆಯೊಡನೆ ತನ್ನದೊಂದು ಸೆಲ್ಫಿ ತೆಗೆದುಕೊಳ್ಳುವ ಪುಟಾಣಿ ಬಾಲಕಿಯನ್ನು ನೋಡಿದಾಗ ಹಾಗನಿಸುತ್ತಿದೆ. ಮೊಬೈಲ್ ಪರದೆಯ ಮೇಲೆ ತಮ್ಮಿಬ್ಬರನ್ನು ನೋಡಿ ಮುಗುಳು ನಗುತ್ತಿದ್ದಾಳೆ. ಮೇಕೆಯು ಸೆಲ್ಫಿ ತೆಗೆಸಿಕೊಳ್ಳಲು ಒಪ್ಪಿಗೆಯ ಮುದ್ರೆಯೊತ್ತಿದಂತಿದೆ. ತಾನು ಬಯಸಿದಂತೆ ಕೇಳುವ ಮೇಕೆಯೆಂಬ ಈ ಸ್ನೇಹಿತನ ಬಗ್ಗೆ ಆಕೆಯ ಕಂಗಳಲ್ಲಿ ಅಪಾರ ವಿಶ್ವಾಸ ಕಾಣುತ್ತಿದೆಯೇ... ಚಿತ್ರವನ್ನು ನೋಡಿದಾಗ ನಿಮ್ಮ ಮನದಲ್ಲಿಯೂ ಕಾವ್ಯದ ಸಾಲುಗಳು ಹೊಳೆದಿರಬಹುದು. ಹಾಗಿದ್ದರೆ ಚಿತ್ರವನ್ನು ಗಮನಿಸಿ, ಕವಿತೆಯೊಂದನ್ನು ಬರೆದು ನಮಗೆ ಕಳುಹಿಸಿ.

ನಿಮ್ಮ ಕಲ್ಪನೆಯ ಕವಿತೆ ಜೂನ್ 15ರ ಒಳಗೆ ನಮಗೆ ತಲುಪಬೇಕು.

---

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in